# ಟೆಸ್ಟ್ ಬಲು ಇಷ್ಟ: ಸುರೇಶ್ ರೈನಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಿಮಗೆ ಟಿ-20 ಕ್ರಿಕೆಟ್ ತುಂಬಾ ಇಷ್ಟ ಅಲ್ಲವೇ' ಎಂಬ ವಿದ್ಯಾರ್ಥಿಯೊಬ್ಬನ ನೇರ ಪ್ರಶ್ನೆಗೆ ಭಾರತದ ತಂಡದ ಕ್ರಿಕೆಟ್ ಆಟಗಾರ ಸುರೇಶ್ ರೈನಾ ನಗುತ್ತಲೇ 'ಅಲ್ಲ' ಎಂಬಂತೆ ತಲೆಯಾಡಿಸಿದರು. 'ನನಗೆ ಟೆಸ್ಟ್ ಆಡುವುದು ತುಂಬಾ ಇಷ್ಟ. ಭಾರತ ಟೆಸ್ಟ್ ತಂಡದಲ್ಲಿ ಪ್ರಮುಖ ಆಟಗಾರನಾಗಿ ಉತ್ಕೃಷ್ಟ ಪ್ರದರ್ಶನ ನೀಡಬೇಕು ಎಂಬ ಮಹದಾಸೆ' ಎಂದು ಪ್ರತಿಕ್ರಿಯಿಸಿದರು.

ಮಂಗಳವಾರ 26ನೇ ವರ್ಷಕ್ಕೆ ಕಾಲಿಡಲಿರುವ ರೈನಾ ಉದ್ಯಾನನಗರಿಯಲ್ಲಿ ವಿದ್ಯಾರ್ಥಿಗಳ ಪ್ರಶ್ನೆಗಳನ್ನು ಸಾವಧಾನದಿಂದಲೇ ಎದುರಿಸಿದರು. ವಿದ್ಯಾರ್ಥಿಗಳ ಬೌನ್ಸರ್‌ನಂತಹ ಪ್ರಶ್ನೆಗಳಿಗೆ ಅವರದ್ದು ನಗುವೇ ಉತ್ತರವಾಗಿತ್ತು. ಸುಮಾರು ಅರ್ಧ ಗಂಟೆ ಕಾಲ ವಿದ್ಯಾರ್ಥಿಗಳೊಂದಿಗೆ ಮುಕ್ತ ಸಂವಾದ ನಡೆಸಿದರು.

ಸ್ಯಾಪ್ ಲ್ಯಾಬ್ಸ್ ಆಫ್ ಇಂಡಿಯಾವು ವಿದ್ಯಾರ್ಥಿಗಳಿಗೆ ತಂತ್ರಜ್ಞಾನ ಸಂಬಂಧಿ ವಿಷಯಗಳ ಬಗ್ಗೆ ತರಬೇತಿ ನೀಡಲು ನಗರದಲ್ಲಿ ಸೋಮವಾರ ಆಯೋಜಿಸಿದ್ದ 'ಸ್ಯಾಪ್ ಟೆಕ್ನಿವರ್ಸಿಟಿ-2012' ಕಾರ್ಯಕ್ರಮದಲ್ಲಿ ರೈನಾ ವಿದ್ಯಾರ್ಥಿಗಳಿಗೆ ಸ್ಫೂರ್ತಿ ತುಂಬಿದರು.

'ನೀವು ಭಾರತ ತಂಡದ ಭವಿಷ್ಯದ ನಾಯಕ ಎಂಬ ಮಾತು ಕೇಳಿಬರುತ್ತಿದೆಯಲ್ಲಾ' ಎಂಬ ವಿದ್ಯಾರ್ಥಿಗಳ ತುಂಟ ಪ್ರಶ್ನೆಗೆ, 'ನಾನು ನಾಯಕತ್ವವನ್ನು ಪ್ರೀತಿಸುತ್ತೇನೆ. ಜವಾಬ್ದಾರಿ ಹೊರುವುದು ಇಷ್ಟದ ಕೆಲಸವೇ. ಆದರೆ, ತಂಡದ ನಾಯಕ ಯಾರಾಗಬೇಕು ಎಂದು ಕ್ರಿಕೆಟ್ ಆಯ್ಕೆ ಮಂಡಳಿ ನಿರ್ಧರಿಸುತ್ತದೆ. ಭವಿಷ್ಯದಲ್ಲಿ ನಾಯಕ ಜವಾಬ್ದಾರಿ ಸಿಗಬಹುದು' ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ಸ್ವದೇಶದಲ್ಲಿ ಅತ್ಯುತ್ತಮ ಪ್ರದರ್ಶನ ನೀಡುವ ಭಾರತ ತಂಡ ವಿದೇಶದಲ್ಲೇಕೆ ಪೇಲವ ಪ್ರದರ್ಶನ ನೀಡುತ್ತದೆ' ಎಂಬ ವಿದ್ಯಾರ್ಥಿಯೊಬ್ಬನ ಆಕ್ಷೇಪಕ್ಕೆ 'ಈಚಿನ ವರ್ಷಗಳಲ್ಲಿ ವಿದೇಶದಲ್ಲೂ ತಂಡ ಸರಣಿ ಗೆಲುವು ಸಾಧಿಸಿದೆ. ಆಸ್ಟ್ರೇಲಿಯಾ, ನ್ಯೂಜಿಲೆಂಡ್ ಮತ್ತಿತರ ತಂಡಗಳ ವಿರುದ್ಧ ಜಯಭೇರಿ ಬಾರಿಸಿದೆ. ಮುಂಬರುವ ವಿದೇಶಿ ಸರಣಿಗಳಲ್ಲಿ ಇದೇ ಪ್ರದರ್ಶನ ಮಟ್ಟ ಕಾಯ್ದುಕೊಳ್ಳಲಿದೆ' ಎಂದು ರೈನಾ ಭರವಸೆಯ ಮಾತುಗಳನ್ನಾಡಿದರು.

'ಮಹೇಂದ್ರ ಸಿಂಗ್ ದೋನಿ ಶ್ರೇಷ್ಠ ನಾಯಕ. ಅಲ್ಲದೆ ಅವರೊಬ್ಬ ಸರಳ ವ್ಯಕ್ತಿ. ಕ್ರೀಡಾಂಗಣದಲ್ಲಿ ಎಲ್ಲರಿಗೂ ಆದ್ಯತೆ ನೀಡಿ ಸಹ ಆಟಗಾರರಿಗೆ ಸ್ಫೂರ್ತಿ ತುಂಬುತ್ತಾರೆ. ನಾಯಕನಾಗಿ ಈಗಲೂ ಅವರ ನಿರ್ವಹಣೆ ಶ್ರೇಷ್ಠವಾಗಿದೆ. ವಿಶ್ವಕಪ್ ಫೈನಲ್‌ನಲ್ಲಿ ಸಿಕ್ಸರ್ ಸಿಡಿಸುವ ಮೂಲಕ ತಂಡವು ವಿಶ್ವಕಪ್ ಮುಡಿಗೇರಿಸಿಕೊಳ್ಳುವಂತೆ ಮಾಡಿದ ದೋನಿ ಅವರ ಆಟ ಸ್ಮರಣೀಯ ಇನ್ನಿಂಗ್ಸ್‌ಗಳಲ್ಲಿ ಒಂದು' ಎಂದು ಶ್ಲಾಘಿಸಿದರು.

'ರೋಹಿತ್ ಶರ್ಮ ಅವರಂತಹ ಆಟಗಾರರು ನಿರಂತರವಾಗಿ ಕೆಟ್ಟ ಪ್ರದರ್ಶನ ನೀಡಿದ ಬಳಿಕವೂ ತಂಡಕ್ಕೆ ಆಯ್ಕೆಯಾಗುತ್ತಲೇ ಇರುತ್ತಾರೆ. ಇಂತಹ ಕೆಟ್ಟ ಸ್ಥಿತಿ ಯಾಕೆ ಇದೆ. ಅದರ ಬದಲು ರಾಬಿನ್ ಉತ್ತಪ್ಪ ಅವರಂತಹ ಆಟಗಾರರಿಗೆ ಅವಕಾಶ ನೀಡಬಹುದಲ್ಲವೇ' ಎಂದು ವಿದ್ಯಾರ್ಥಿಯೊಬ್ಬನಿಂದ ಚಾಟಿಯಂತಹ ಪ್ರಶ್ನೆ ತೂರಿ ಬಂತು. 'ಈ ಪ್ರಶ್ನೆಗೆ ಉತ್ತರ ನೀಡಲು ನಾನು ಸೂಕ್ತ ವ್ಯಕ್ತಿ ಅಲ್ಲ. ಆಯ್ಕೆ ಮಂಡಳಿಯ ಅಧ್ಯಕ್ಷ ಸಂದೀಪ್ ಪಾಟೀಲ್ ಅವರಲ್ಲಿ ಕೇಳುವುದು ಉತ್ತಮ. ಅವರಿಂದ ನಿಮಗೆ ಸಮರ್ಪಕ ಉತ್ತರ ದೊರಕಲಿದೆ' ಎಂದು ಚುಟುಕಾಗಿ ಪ್ರತಿಕ್ರಿಯಿಸಿದರು.




ಸ್ಯಾಪ್ ಲ್ಯಾಬ್ಸ್ ಆಫ್ ಇಂಡಿಯಾ ಆಶ್ರಯದಲ್ಲಿ ವಿದ್ಯಾರ್ಥಿಗಳಿಗೆ ತಂತ್ರಜ್ಞಾನ ಸಂಬಂಧಿ ವಿಷಯಗಳ ಬಗ್ಗೆ ಮಾರ್ಗದರ್ಶನ ನೀಡಲು ಬೆಂಗಳೂರಿನಲ್ಲಿ ಸೋಮವಾರ ಆಯೋಜಿಸಿದ್ದ 'ಸ್ಯಾಪ್ ಟೆಕ್ನಿವರ್ಸಿಟಿ-2012' ಕಾರ್ಯಕ್ರಮದಲ್ಲಿ ಕ್ರಿಕೆಟ್ ಆಟಗಾರ ಸುರೇಶ್ ರೈನಾ ಹಾಗೂ ಸ್ಯಾಪ್ ಉಪಾಧ್ಯಕ್ಷ (ಮಾರುಕಟ್ಟೆ ಹಾಗೂ ಸಂವಹನ ವಿಭಾಗ) ಸುಂದರ್ ಮದಕ್ಷಿರ ಅವರ ಸಂತಸದ ಕ್ಷಣ...

-ಪ್ರಜಾವಾಣಿ ಚಿತ್ರ

'ನೀವು ಭಾರತ ತಂಡದ ಅತ್ಯುತ್ತಮ ಕ್ಷೇತ್ರರಕ್ಷಕ. ತಂಡದ ಬಹುತೇಕ ಆಟಗಾರರು ಕಳಪೆ ಕ್ಷೇತ್ರರಕ್ಷಣೆ ಮಾಡುತ್ತಾರೆ. ಇಂತಹ ಪರಿಸ್ಥಿತಿ ಯಾಕೆ ಇದೆ' ಎಂದು ಹತ್ತಾರು ವಿದ್ಯಾರ್ಥಿಗಳು ಒಕ್ಕೊರಲಿನಿಂದ ಪ್ರಶ್ನಿಸಿದರು. 'ಈ ಆರೋಪವನ್ನು ಒಪ್ಪುವುದಿಲ್ಲ. ವಿರಾಟ್ ಕೊಹ್ಲಿ, ರೋಹಿತ್ ಶರ್ಮ, ಮನೋಜ್ ತಿವಾರಿ, ಅಜಿಂಕ್ಯ ರಹಾನೆ ಉತ್ತಮ ಕ್ಷೇತ್ರರಕ್ಷಕರು. ರಾಬಿನ್ ಸಿಂಗ್ ಫೀಲ್ಡಿಂಗ್ ಕೋಚ್ ಆದ ಬಳಿಕ ಕ್ಷೇತ್ರರಕ್ಷಣೆಯಲ್ಲಿ ಸಾಕಷ್ಟು ಸುಧಾರಣೆ ಕಂಡಿದೆ' ಎಂದು ಸಮಜಾಯಿಷಿ ನೀಡಿದರು.

'ಕಠಿಣ ಪರಿಶ್ರಮವೇ ಯಶಸ್ಸಿಗೆ ರಹದಾರಿ. ಕಠಿಣ ಪರಿಶ್ರಮವೇ ನನ್ನ ಯಶಸ್ಸಿಗೆ ಕಾರಣ. ನೀವು ಸಹ ಪರಿಶ್ರಮ ವಹಿಸಿದರೆ ಯಶಸ್ಸು ಕಟ್ಟಿಟ್ಟ ಬುತ್ತಿ' ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು. ಸಂವಾದದಲ್ಲಿ ವಿದ್ಯಾರ್ಥಿಗಳಿಗಂತೂ ಕ್ರಿಕೆಟ್ ವಿದ್ಯಮಾನಗಳನ್ನು ಪ್ರಶ್ನಿಸುವ ತವಕ. ಸಂವಾದವಿಡೀ ಕ್ರಿಕೆಟ್ ಸುತ್ತವೇ ಗಿರಕಿ ಹೊಡೆಯಿತು.